ಪ್ರತಿ ಪಂದ್ಯಾವಳಿಗೆ ಪ್ರತಿ ಕ್ರೀಡಾ ಪಟುವಿಗೆ ರೂ. 100.00 ಕ್ರೀಡಾ ಗಂಟು ನೀಡಲಾಗುತ್ತಿದೆ. ಅಲ್ಲದೆ ವೈದ್ಯಕೀಯ ಖರ್ಚು, ಸಾರಿಗೆ ಖರ್ಚನ್ನು ನೀಡಲಾಗುತ್ತಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವ ಕರ್ನಾಟಕ ಕ್ರೀಡಾ ಪಟುಗಳಿಗೆ ಬೆಂಗಳೂರಿನಿಂದ ದೆಹಲಿಯವರೆಗೆ ರೈಲು ವೆಚ್ಚ, ದಹಲಿಯಿಂದ ಪಂದ್ಯಾವಳಿ ನಡೆಯುವ ಸ್ಥಳಕ್ಕೆ ವಿಮಾನ ದರ, ವೀಸಾ, ಏರಪೋರ್ಟ, ಟ್ಯಾಕ್ಸ್ ಖರ್ಚು, ಆಹಾರ ಭತ್ಯೆ, ವಸತಿ ಖರ್ಚುಗಳನ್ನು ನೀಡಲಾಗುತ್ತದೆ. ಕೇಂದ್ರ ಸರ್ಕಾರ ಅಥವಾ ಸಂಬಂಧಿತ ಕ್ರೀಡಾ ಪೆಡರೇಷನ್ ಈ ವೆಚ್ಚಗಳನ್ನು ಭರಿಸದಿದ್ದಾಗ ಮಾತ್ರ ಈ ಸೌಲಭ್ಯಗಳನ್ನು ನೀಡಲಾಗುವುದು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಡಿ. ಮಂಜುನಾಥ : ತಾರೀಖು 20.9.95ರ 26ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 48 ಪ್ರಶ್ನೆಗಳ 41 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಿದ್ದೇನೆ.

ರಾಜ್ಯದಲ್ಲಿರುವ ಸರಕಾರಿ ಡೆಂಟಲ್ ಕಾಲೇಜುಗಳು

2221 - ಶ್ರೀ ಯು.ಜಿ. ಬಣಕಾರ್ (ಹಿರೇಕೆರೂರ್) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಡೆಂಟಲ್ ಕಾಲೇಜುಗಳು ಎಷ್ಟು? ಯಾವುವು?

ಆ) ಬೆಂಗಳೂರಿನಲ್ಲಿರುವ ಸರ್ಕಾರಿ ಡೆಂಟಲ್ ಕಾಲೇಜು ಎಂದು ಪ್ರಾರಂಭಿಸಲಾಯಿತು ಪ್ರಾರಂಭವಾದ ವರ್ಷದಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಇತ್ತು? ಆ ವೇಳೆಯಲ್ಲಿ ಇದ್ದ ಸಿಬ್ಬಂದಿಯ ವಿವರ ಏನು? ಪ್ರಿನ್ಸಿಪಾಲ್, ಪ್ರೊಪೆಸರ್, ಲೆಕ್ಚರರ್, ಅಸಿಸ್ಟೆಂಟ್ ಪ್ರೊಪೆಸರ್, ನರ್ಸ ಹಾಗೂ 'ಡಿ' ವರ್ಗದವರ ವಿವರವನ್ನೊದಗಿಸುವುದು.

ಇ) ಈಗ ಕಾಲೇಜಿನಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ಇದೆ. ಈಗ ಇರುವ ಸಿಬ್ಬಂದಿಯ ವಿವರಗಳನ್ನೊದಗಿಸುವುದು?

ಈ) ಡೆಂಟಲ್ ಕೌನ್ಸಿಲ್ ಇಂಡಿಯಾ ಪ್ರಕಾರ ಈಗ ಸದರಿ ಕಾಲೇಜಿನಲ್ಲಿ ಇರಬೇಕಾಗಿದ್ದ ಸಿಬ್ಬಂದಿ ವರ್ಗವೆಷ್ಟು?

ಉ) ಸದರಿ ಕಾಲೇಜಿನಲ್ಲಿ ಕೊರತೆ ಇರುವ ಸಿಬ್ಬಂದಿಯನ್ನು ಯಾವಾಗ ತುಂಬಲಾಗುವುದು?

ಊ) ಸದರಿ ಕಾಲೇಜನ್ನು ಸ್ವಾಯುತ್ತ ಸಂಸ್ಥೆಯನ್ನಾಗಿ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಒಂದು. ಸರ್ಕಾರಿ ದಂತ ಮಹಾವಿದ್ಯಾಲಯ, ಬೆಂಗಳೂರು.

ಆ) 1958ರಲ್ಲಿ ಪ್ರಾರಂಭವಾಯಿತು.

10 ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶವಿತ್ತು.

ಆ ವೇಳೆಯಲ್ಲಿ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಿಂದ ಒಬ್ಬರು ಪ್ರಾಧ್ಯಾಪಕರನ್ನು ಪ್ರಾಂಶುಪಾಲರಾಗಿ ನಿಯೋಜಿಸಲಾಗಿತ್ತು. ಜೊತೆಗೆ 5 ಜನ ಉಪನ್ಯಾಸಕರನ್ನು ನಿಯೋಜಿಸಲಾಗಿತ್ತು. ಇವರ ಪೈಕಿ 4ಜನ ಉಪನ್ಯಾಸಕರನ್ನು ಬಿ.ಡಿ.ಎಸ್. ಕಂಡೆನ್ಸ ಕೋರ್ಸಿಗೆ ಬೊಂಬಾಯಿಗೆ ನಿಯೋಜಿಸಲಾಗಿತ್ತು. ಕೋರ್ಸ ಮುಗಿದ ನಂತರ ಅವರನ್ನು ಉಪನ್ಯಾಸಕರನ್ನಾಗಿ ನೇಮಿಸಲಾಯ್ತು. ಇಬ್ಬರು 'ಡಿ' ದರ್ಜೆ ನೌಕರರನ್ನು ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಿಂದ ನಿಯೋಜನೆ ಮೇಲೆ ನೇಮಿಸಲಾಗಿತ್ತು.

1965ರಲ್ಲಿ 40 ವಿದ್ಯಾರ್ಥಿಗಳ ಪ್ರವೇಶ ಅವಕಾಶದೊಂದಿಗೆ ಅನುಬಂಧ 1ರಲ್ಲಿ ಸೂಚಿಸಿರುವ ಹುದ್ದೆಗಳು ಮಂಜೂರಾಗಿರುತ್ತವೆ.

ಇ) 70 ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶವಿದೆ.

	ಮಂಜೂರಾತಿ	ಕಾರ್ಯನಿರ್ವಹಿಸುತ್ತಿರುವವರು	ಖಾಲಿ
ಪ್ರಾಧ್ಯಾಪಕರು	8	6	2
ಸಹಾಯಕಪ್ರಾಧ್ಯಾಪಕರು	11	8	3
ಉಪನ್ಯಾಸಕರು	15	12	3

ಈ) ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾದ ಇವರ ನಿಯಮಾನುಸಾರ 70 ವಿದ್ಯಾರ್ಥಿಗಳಿಗೆ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮತ್ತು ನಮೂದಿಸಿದಂತೆ ಸಿಬ್ಬಂದಿ ವರ್ಗ ಇರಬೇಕಾಗುತ್ತದೆ.

ಪ್ರಾಧ್ಯಾಪಕರು	-	9
ಸಹಾಯಕ ಪ್ರಾಧ್ಯಾಪಕರು	-	23
ಉಪನ್ಯಾಸಕರು	-	39
ಒಟ್ಟು	**-**	**71**

ಉ) ಶೀಘ್ರ ಕ್ರಮ ತೆಗೆದುಕೊಳ್ಳಲಾಗುವುದು.

ಊ) ಇಂತಹ ಯಾವುದೇ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಅನುಬಂಧ - 1

	ಸಿಬ್ಬಂದಿಯ ವಿವರ	ಹುದ್ದೆ
1)	ಪ್ರಾಧ್ಯಾಪಕರು	5
2)	ರೀಡ್ಕರ್	7
3)	ಲೆಕ್ಚರರ್	11
4)	ಕಛೇರಿ ಅಧೀಕ್ಷಕರು	2
5)	ಪ್ರಥಮ ದರ್ಜೆ ಸಹಾಯಕರು	3
6)	ದ್ವಿತೀಯ ದರ್ಜೆ ಸಹಾಯಕರು	4
7)	ಶೀಘ್ರಲಿಪಿಕಾರರು ದರ್ಜೆ- 1	2
8)	ಬೆರಳಚ್ಚುಗಾರರು	1
9)	ಗ್ರಂಥಪಾಲಕರು ದರ್ಜೆ-2	1
10)	ದಾದಿಯರು	5
11)	ಡೆಂಟಲ್ ಮಕ್ಯಾನಿಕ್	6
12)	ಡೆಂಟಲ್ ಹೈಜಿನಿಕ್	4
13)	ಲ್ಯಾಬೋರೇಟರಿ ಟೆಕ್ನೀಷಿಯನ್	2
14)	ಗ್ರೂಪ್-ಡಿ	38

ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸುವುದು.

2222 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸಿಕೊಳ್ಳುವ ಅಧಿಕಾರಿ ಯಾರಿಗೆ ಕೊಡಲಾಗಿದೆ ಹಾಗೂ ಎಂದಿನಿಂದ ಕೊಡಲಾಗಿದೆ?.

ಆ) ಧಾರವಾಡ ಜಿಲ್ಲೆಯಲ್ಲಿ 7-8-95ರೊಳಗೆ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸಿಕೊಳ್ಳಲಾಗಿದೆಯೇ?

ಇ) ನೇಮಿಸದೆ ಇದ್ದರೆ ಯಾತಕ್ಕಾಗಿ ನೇಮಿಸಿಕೊಳ್ಳಲಾಗಲಿಲ್ಲ ಹಾಗೂ ವಿಳಂಬವಾಗಲು ಕಾರಣವೇನು?